ಬೆಂಗಳೂರು ಮಹಾನಗರಪಾಲಿಕೆಯ ಆರೋಗ್ಯ ವಿಭಾಗದವರು ಕಲಬೆರಕೆ ಹಾಲಿನ ಮಾರಾಟವನ್ನು ಪತ್ತೆ ಮಾಡುವ ಬಗ್ಗೆ

449 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಬಲ್ಕ್‌ವೆಂಡಿಂಗ್ ಬೂತುಗಳಲ್ಲಿ ಕಲಬೆರಕೆ ಹಾಲಿನ ಮಾರಾಟವು ನಿರಂತರವಾಗಿ ನಡೆಯುತ್ತಿದ್ದರೂ ಮಹಾನಗರ ಪಾಲಿಕೆಯ ಆರೋಗ್ಯ ವಿಭಾಗದವರು ಯಾವುದೇ ಕ್ರಮಗಳನ್ನು ಕೈಗೊಳ್ಳದಿರಲು ಕಾರಣಗಳೇನು?

ಆ) ಬೂತ್ ನಂ. 315, 316, 317 ಮತ್ತು 318 ಬೂತ್‌ಗಳಿಂದ ಮಹಾನಗರ ಪಾಲಿಕೆಯವರು ಎಷ್ಟು ಬಾರಿ ಕಲಬೆರಕೆಯನ್ನು ಪತ್ತೆ ಹಚ್ಚಲು ಹಾಲಿನ ಸ್ಯಾಂಪಲ್ ಪಡೆದುಕೊಂಡು ಹೋಗಿರುವರು?

ಇ) ಇದುವರೆವಿಗೂ ಬಲ್ಕ್‌ವೆಂಡಿಂಗ್ ಬೂತ್‌ಗಳ ಎಷ್ಟು ವಿಜೆಂಟರು ಕಲಬೆರಕೆ ಪ್ರಕರಣ ಸಲುವಾಗಿ ಮೊಕದ್ದಮೆ ಹೂಡಲಾಗಿದೆ (ಇವರ ಹೆಸರು ಮತ್ತು ವಿವರಗಳನ್ನು ಒದಗಿಸುವುದು)

ಈ) ಈ ಪೈಕಿ ಎಷ್ಟು ಮೊಕದ್ದಮೆಗಳು ಸಾಬೀತಾಗಿವೆ?. ಇನ್ನು ಎಷ್ಟು ಮೊಕದ್ದಮೆಗಳು ನ್ಯಾಯಾಲಯದ ಮುಂದೆ ಇವೆ?

ಉ) ಸರದಿ ಬೂತ್‌ಗಳಲ್ಲಿ ಬೆಳಗಿನ ವೇಳೆ 6 ರಿಂದ 7-30ರವರೆಗೆ ನಿರಂತರವಾಗಿ ಕಲಬೆರಕೆ ಪ್ರಕರಣಗಳು ನಡೆಯುತ್ತಿರುವುದರಿಂದ ಮಹಾನಗರ ಪಾಲಿಕೆಯ ಆರೋಗ್ಯ ವಿಭಾಗದವರು ಇಂತಹ ಬೂತ್‌ಗಳ ಮೇಲೆ (315, 316, 317 ಮತ್ತು 318) ಕ್ರಮಕೈಗೊಳ್ಳುವರೇ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು): ಅ) ಬಲ್ಕ್‌ವೆಂಡಿಂಗ್ ಬೂತುಗಳಿಂದ ವಿಶ್ಲೇಷಣೆಗಾಗಿ ಮಾದರಿಗಳನ್ನು ಸಂಗ್ರಹಿಸಲಾಗುತ್ತಿದೆ.

ಆ) ಈ ಬೂತುಗಳಿಂದ ಸ್ಯಾಂಪಲ್ ಪಡೆದಿರುವುದಿಲ್ಲ.

ಇ) ಆರು. ವಿವರಗಳು ಈ ಕೆಳಗಿನಂತಿವೆ:

1) ಬೂತ್ ನಂ. 304, ಮಾರ್ಕೆಟ್ ಹತ್ತಿರ ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಂಗಳೂರು.

2) ಬೂತ್ ನಂ. 201, 5ನೇ ಕ್ರಾಸ್, ಗಾಂಧಿನಗರ, ಬೆಂಗಳೂರು - 560 009.

3) ಬೂತ್ ನಂ. 205, ವೆಂಕಟೇಶ್, ಪುಟ್ಟಸ್ವಾಮಿಯವರ ಮಗ, ನಂಜಾಂಬ ಅಗ್ರಹಾರ, ಚಾಮರಾಜಪೇಟೆ, ಬೆಂಗಳೂರು -560 018.

4) ಬೂತ್ ನಂ. 501, ಕೆ. ಸುರೇಶ್ ಕುಮಾರ್ ಹಳೆ ಬಿನ್ನಮಂಗಲ,2ನೇ ಸ್ಟೇಜ್, ಇಂದಿರಾನಗರ, ಬೆಂಗಳೂರು -560 038.

5) ಬೂತ್ ನಂ. 502, ತಿಮ್ಮಯ್ಯ, ಪಾರ್ಕ್‌ರೋಡ್, 12ನೇ ಕ್ರಾಸ್, ಇಂದಿರಾನಗರ, ಬೆಂಗಳೂರು - 560 038.

6) ಬೂತ್ ನಂ. 402, ಸಿ. ಸುಶೀಲನ್, ರಂಗಸ್ವಾಮಿ ಮೊದಲಿಯರ್ ರಸ್ತೆ, ಬೆಂಗಳೂರು - 560 042.

ಈ) ಆರು ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇವೆ.

ಉ) ಸೂಕ್ತಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲಾಗಿದೆ.